CC No.:1500/2021
P.W.:1

ಈ ದಿನ ದಿಃ21.09.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ- ಆರೋಪಿ ಪರ ಶ್ರೀ ಟಿ.ಡಿ.ಎನ್ ವಕೀಲರಿಂದಃ-**

ನಾನು ಪದವಿದರಳಾಗಿರುತ್ತೇನೆ. ನಾನು ಈಗ ಬೆಂಗಳೂರಿನಲ್ಲಿ ವಾಸವಿರುತ್ತೇನೆ. ನನ್ನ ಮಗು 5 ನೇ ತರಗತಿಯನ್ನು ಪೂರ್ತಿಗೊಳಿಸುವವರೆಗೆ ನಾನು ಬೆಂಗಳೂರಿನಲ್ಲಿ ವಾಸವಿದ್ದು, ನಂತರ ನನ್ನ ಮಗುವನ್ನು 6 ನೇ ತರಗತಿಯಿಂದ 10 ನೇ ತರಗತಿ ವರೆಗೆ ಜೈನ್ ಸಂಸ್ಥೆ ವಿದ್ಯಾಭ್ಯಾಸ ಮಾಡಿದ್ದು, ಆ ಸಮಯದಲ್ಲಿ ನಾನು ಕನಕಪುರದಲ್ಲಿ ವಾಸವಿದ್ದು, ನಂತರದಿಂದ ನಾನು ಬೆಂಗಳೂರಿನಲ್ಲಿ ವಾಸವಿದ್ದೇನೆ.

ನಾನು ನನ್ನ ತಂದೆ ತಾಯಿಯೊಂದಿಗೆ ಬೆಂಗಳೂರಿನಲ್ಲಿ ವಾಸವಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡನೊಂದಿಗೆ ವಾಸವಿದ್ದೆ. ನನ್ನ ಗಂಡ ತೀರಿಕೊಂಡ ನಂತರ ನಾನು ಕನಕಪುರಕ್ಕೆ ಬಂದಿರುತ್ತೇನೆ. ನನ್ನ ಗಂಡ 2015 ರಲ್ಲಿ ಮೃತರಾಗಿರುತ್ತಾರೆ. ನನ್ನ ಗಂಡ ತೀರಿದ ನಂತರ ನನ್ನ ತಂದೆಯೊಂದಿಗೆ ಕನಕಪುರದಲ್ಲಿ ವಾಸವಿದ್ದೆ.

ಆರೋಪಿ ನಟರಾಜುನನ್ನು ಹೊರತುಪಡಿಸಿ ಜೈನ್ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡುವ ಇಬ್ಬರು ಮತ್ತು ಮೂರು ಜನರ ಹೆಸರನ್ನು ಹೇಳಬಹುದು ಬೇರೆಯವರ ಹೆಸರು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿ ನನಗೆ ವೈಯಕ್ತಿಕವಾಗಿ ಪರಿಚಯವಿರುವುದಿಲ್ಲ. ಶಾಲೆಯ ವತಿಯಿಂದ ನನಗೆ ಪರಿಚಯವಿರುತ್ತಾರೆ. ಆರೋಪಿ ಜೈನ್ ಶಿಕ್ಷಣ ಸಂಸ್ಥೆಯಲ್ಲಿ ನನಗೆ 2016 ರಿಂದ ಪರಿಚಿತರಾಗಿರುತ್ತಾರೆ.

ಆರೋಪಿತನು ನನಗೆ ಸಿಂಡಿಕೇಟ್ ಬ್ಯಾಂಕಿನ ಚೆಕ್ ನಂ.718417 ನ್ನು ನೀಡಿರುತ್ತಾನೆ. ಸದರಿ ಚೆಕ್ಕನ್ನು ದಿ.27.01.2021 ರಂದು ಬ್ಯಾಂಕಿಗೆ ನಗದೀಕರಣಕ್ಕಾಗಿ ಸಲ್ಲಿಸಿರುತ್ತೇನೆ. ಸಿಂಡಿಕೇಟ್ ಬ್ಯಾಂಕಿನಿಂದ ಸದರಿ ಚೆಕ್ಕಿನ ಕುರಿತು ಅಮಾನ್ಯಗೊಂಡ ಬಗ್ಗೆ ಹಿಂಬರಹ ಬಂದಿದ್ದು, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಿಂಡಿಕೇಟ್ ಬ್ಯಾಂಕಿನ ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಐಡಿಬಿಐ ಬ್ಯಾಂಕಿನಿಂದ ಪಡೆದ ಹಿಂಬರಹವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿ.

ಐಡಿಬಿಐ ಬ್ಯಾಂಕಿನಿಂದ ಸಿಂಡಿಕೇಟ್ ಬ್ಯಾಂಕಿಗೆ ಚೆಕ್ಕನ್ನು ಕಳುಹಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿತನ ನಡುವೆ ಯಾವುದೇ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಬ್ಯಾಂಕಿನ ಮ್ಯಾನೇಜರ್ ನೊಂದಿಗೆ ಶ್ಯಾಮಿಲಾಗಿ ನಿಪಿ-2 ಹಿಂಬರಹವನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ಮತ್ತು ಆರೋಪಿತನ ಹೆಂಡತಿ ನಿರ್ಮಲ ಪರಿಚಿತರು ಎಂದರೆ ಸರಿಯಲ್ಲ. ಆರೋಪಿಯನ್ನು ಹೊರತುಪಡಿಸಿ ಇತರ ಅನೇಕ ಜನರೊಂದಿಗೆ ನಾನು ಲೇವಾದೇವಿ ವ್ಯವಹಾರ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಇದೇ ನ್ಯಾಯಾಲಯದಲ್ಲಿ ನಾನು ಆರೋಪಿತನ ವಿರುದ್ಧ ಇನ್ನೊಂದು ಚೆಕ್ ಬೌನ್ಸ್ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿ. ಆರೋಪಿತನ ಹೆಂಡತಿ ನಿರ್ಮಲ ನನ್ನಿಂದ ರೂ.2,50,000/- ಹಣವನ್ನು ಬಡ್ಡಿಗಾಗಿ ಸಾಲ ಪಡೆದಿದ್ದರೂ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ನಿರ್ಮಲ ಯಾರು ಎಂಬುವುದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿತನ ಹೆಂಡತಿ ಪಡೆದ ಸಾಲಕ್ಕೆ ಆರೋಪಿತನು ಭದ್ರತೆಗಾಗಿ ತನ್ನ ಎರಡು ಖಾಲಿ ಚೆಕ್ಕುಗಳನ್ನು ನನಗೆ ನೀಡಿದ್ದನು

ಎಂದರೆ ಸರಿಯಲ್ಲ. ಆರೋಪಿತನಿಂದ ರೂ.1,88,000/- ಹಣವನ್ನು ಬಡ್ಡಿ ರೂಪದಲ್ಲಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿತಿಂಗಳು 12 ಸಾವಿರದಂತೆ 18 ತಿಂಗಳವರೆಗೆ ಪ್ರತಿಶತ 4 ರ ಬಡ್ಡಿದರದಲ್ಲಿ ಆರೋಪಿ ಬಡ್ಡಿ ಹಣ ನೀಡಿರುತ್ತಾನೆ ಎಂದರೆ ಸರಿಯಲ್ಲ. ರೂ.1,12,000/- ಬಾಕಿ ಹಣವನ್ನು ಸಂದಾಯ ಮಾಡಿದ ನಂತರ ಎರಡು ಚೆಕ್ಕುಗಳನ್ನು ಹಿಂದಿರುಗಿಸುತ್ತೇನೆಂದು ಆರೋಪಿಗೆ ಹೇಳಿರುತ್ತೇನೆ ಎಂದರೆ ಸರಿಯಲ್ಲ.

ಕೋವಿಡ್ ಕಾರಣದಿಂದಾಗಿ ಸದರಿ ಅವಧಿಯಲ್ಲಿ ಬಾಕಿ ಹಣವನ್ನು ಹಿಂದಿರುಗಿಸಲು ಆಗದೆ ಇದ್ದುದ್ದರಿಂದ ಈಗ ಹಿಂದಿರುಗಿಸಲು ಸಾಧ್ಯವಿದ್ದರೂ ಪಡೆದುಕೊಳ್ಳಲು ನೀವು ಸಿದ್ದರಿಲ್ಲ ಎಂದರೆ ಸರಿಯಲ್ಲ.

ನಿಪಿ-1 ರ ಮೇಲಿರುವ ಸಹಿಯ ಶಾಹಿ ಮತ್ತು ಇತರ ಒಕ್ಕಣಿಕೆಯ ಶಾಹಿ ಬೇರೆ ಬೇರೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಿ.6.2.2021 ರಂದು ನಾನು ವಕೀಲರ ಮೂಲಕ ನೋಟಿಸ್ ಕಳುಹಿಸಿರುತ್ತೇನೆ. ನಾನು ಕಳುಹಿಸಿರುವ ನೋಟಿಸ್ಸಿನಲ್ಲಿ ತೋರಿಸಿರುವ ವಿಳಾಸದಲ್ಲಿ ಆರೋಪಿ ಆಗ ಇರಲಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.

CC No.:1500/2021
P.W.:1